“ಅಯ್ಯೋ... ಪಾಪ. ಇಷ್ಟು ದೂರ ಏಕೆ ಬಂದರು. ಮಿನಿಸ್ಟ್ರಿ ಆಫ್ ಜಸ್ಟಿಸ್‌ಗೆ ಕ್ಷಮಾದಾನ ನೀಡುವಂತೆ ಕಾಗದ ಬರೆದಿದ್ದರೆ ಸಾಕಿತ್ತು” ಯಾರೋ ಹೇಳಿದರು.

“ಚಂದ್ರು ಹೇಳಿದನಂತೆ... ಅವರು ಕೇಳಲಿಲ್ಲವಂತೆ. ಮಗನ ಶವವನ್ನು ನೋಡಲಿಲ್ಲ. ಕನಿಷ್ಠ ಅವನಿದ್ದ ಜಾಗವನ್ನಾದರೂ ನೋಡುತ್ತೇನೆಂದಳಂತೆ” ಇನ್ನೊಬ್ಬರು.

ಎಲ್ಲರೂ ಸುತ್ತುವರಿದರು. ಒಬ್ಬ ಮುಂದಕ್ಕೆ ಬಂದು, “ದೊಡ್ಡಮ್ಮಾ... ನಾನೂ ಚಂದ್ರು ಎಲ್ಲ ಸೆಟಲ್ ಮಾಡಿದ್ದೀವಿ. ಮೊದಲು ಅವರು ಒಂದು ನಯಾಪೈಸೆ ಕೊಡುವುದಿಲ್ಲ ಎಂದರು. ನಾವು ‘ಕಸಾಸ್’ ಎಂದೆವು. ಕೋರ್ಟ್ ಕಠಿಣ ಶಿಕ್ಷೆ ಹಾಕಿತು. ಅವರು ಸುಪ್ರೀಂಕೋರ್ಟ್‌ಗೆ ಹೋದರು. ಆಗಲೇ ರಂಜಾನ್ ಸಮಯ. ಯಾರಾದರೂ ದಾನಿಗಳು ಸಿಗುತ್ತಾರೆಂದು ನೋಡಿದರು. ಮುಸ್ಲಿಮರಿಗಾದರೆ ಸಿಗುತ್ತಿದ್ದರು. ಇವರಿಗೆ ಸಿಗಲಿಲ್ಲ. ನೇಣಿಗೇರಿಸುವ ದಿನಗಳು ಹತ್ತಿರಬಂದವು. ಆಗ ರಾಜಿಗೆ ಬಂದರು. ಅವರ ತಾಯಿ ಎರಡು ತಿಂಗಳಿನಿಂದ ಇಲ್ಲೇ ಇದ್ದಾಳೆ” ಎಂದ.

ಸಾವಿತ್ರಿ ಅವನನ್ನು ಗುರುತು ಹಿಡಿದು, “ಅರೆ ರವಿ... ನೀನೇಕೆ ಇಲ್ಲಿ ಬಂದಿದ್ದೀಯ” ಎಂದಳು ನೋವಿನಿಂದ.

ರವಿ ನೋವಿನಿಂದ, “ಊರಿನಲ್ಲಿ ಜೀವನ ಸಾಗಿಸಲು ಏನಿದೆ ದೊಡ್ಡಮ್ಮಾ... ಬೋರು ಹಾಕಿ ಬೋರಲು ಬಿದ್ದೆವು” ಎಂದ.

ಸಾವಿತ್ರಿ ಒಮ್ಮೆ ಎಲ್ಲರ ಮುಖ ನೋಡಿದಳು. ಯಾರ ಮುಖದಲ್ಲಿಯೂ ನಗುವಿಲ್ಲ. ಇಂತಹದ್ದೇ ಎಂದು ಗುರುತಿಸಲಾಗದ ನೋವು ಕಾಣಿಸುತ್ತಿದೆ. ಕದಲಿಸಿದರೆ ಕಣ್ಣೀರ ಸಮುದ್ರ ಉಕ್ಕುತ್ತದೆಯೇನೋ ಎನ್ನುವಷ್ಟು ದುಃಖವನ್ನು ತಡೆಹಿಡಿದಿದ್ದಾರೆ.

ಸಾವಿತ್ರಿಗೆ ಅವರನ್ನು ನೋಡಿ ಹೃದಯ ಕಿವುಚಿದಂತಾಯಿತು. ಒಬ್ಬೊಬ್ಬರ ಮುಖದಲ್ಲಿಯೂ ಒಂದೊಂದು ಇತಿಹಾಸ. ಜೋರಾಗಿ ಅಳಬೇಕೆಂದುಕೊಂಡಳು. ಅಳು ಬರಲಿಲ್ಲ. ಮದುವೆಯಾದ ತಿಂಗಳಿಗೇ ವಲಸೆ ಬಂದ ರಾಮುಲು, ಬರುತ್ತೇನೆಂದು ಹೇಳಿಕೊಂಡೇ ಮಗಳ ಮದುವೆಗೂ ಬಾರದ ಲಿಂಗಂ, ತಂದೆಯ ದೇಹ ನೋಡಲು ಬರಲಾಗದ ರಾಯಮಲ್ಲು, ಹತ್ತು ವರ್ಷದಿಂದ ಕಾಣಿಸದ ಅಂಜಯ್ಯ, ಕಾಲು ಮುರಿದಿದ್ದರೂ ಮನೆಗೆ ಹೋಗದ ಪೆಂಟಯ್ಯ... ಇವರೆಲ್ಲರನ್ನೂ ಮತ್ತೊಮ್ಮೆ ಮಗದೊಮ್ಮೆ ನೋಡಿದಳು.

ಇದಕ್ಕೆ ಮೊದಲು ಒಬ್ಬ ತಾಯಿಯ ಒಡಲಶೋಕವನ್ನೇ ಹೊತ್ತಿದ್ದಳು. ಈಗ ನೂರಾರು ತಾಯಂದಿರ ಒಡಲಶೋಕ ತನ್ನೊಳಗೆ ಆವರಿಸಿದೆ. ಆದರೂ ಅಳು ಬರುತ್ತಿಲ್ಲ. ಎದೆಭಾರವಾಗಿ ದುಃಖಸಾಗರದಲ್ಲಿ ಮುಳುಗಿದಳು.

“ತಮ್ಮ ನಾಗರಾಜ ಇದ್ದಾಗ ಯಾರಿಗೆ ಏನು ತೊಂದರೆಯಾದರೂ ತಾನೇ ಮುಂದೆ ನಿಂತು ಪರಿಹರಿಸುತ್ತಿದ್ದ. ಇಂಡಿಯನ್ ಎಂಬಸಿಯಲ್ಲಿ ನಾಗರಾಜನ ಹೆಸರು ಕೇಳಿದರೆ ಭಯ. ಅವನ ಗತ್ತೇ ಬೇರೆ. ರಾಜನ ಗುಣ” ಗುಂಪಿನಲ್ಲಿದ್ದ ಒಬ್ಬ ವ್ಯಕ್ತಿ ಹೇಳಿದ.

“ಯಾರು ತಪ್ಪಿಸಿಕೊಂಡರೂ ಇಲ್ಲಿಗೇ ಬರುತ್ತಿದ್ದರು... ಯಾರು ಸತ್ತರೂ ಇವನಿಗೇ ಬಾಧೆ. ಹೆಣವನ್ನು ಭಾರತಕ್ಕೆ ಕಳುಹಿಸುವವರೆಗೂ ನಿದ್ದೆ ಮಾಡುತ್ತಿರಲಿಲ್ಲ. ಕಂಪನಿಗಳಿಗೆ ಕಾಲುಸವೆಸಿ ಅದೆಷ್ಟು ಜನರಿಗೆ ಉದ್ಯೋಗ ಕೊಡಿಸಿದ್ದಾನೆ... ಎಷ್ಟು ಜನಕ್ಕೆ ಪಾಸ್‌ಪೋರ್ಟ್ ಕೊಡಿಸಿದ್ದಾನೆ” ಇನ್ನೊಬ್ಬ ವ್ಯಕ್ತಿ ನೆನಪಿಸಿಕೊಂಡ.

“ಸತ್ತ ಹಿಂದಿನ ದಿನವಿಡೀ ನನ್ನೊಂದಿಗೇ ಇದ್ದ. ಕರೀಂನಗರ ಸಮೀಪದ ಸುನ್ನಾಪುರ್‌ನಿಂದ ಅಣ್ಣತಮ್ಮಂದಿರು ಬಂದಿದ್ದರು. ಕಂಪನಿಗಳು ಸಂಬಳ ಕೊಡದಿದ್ದುದಕ್ಕೆ ತಪ್ಪಿಸಿಕೊಂಡು ಹೋಗಿ ಬಿಲ್ಡಿಂಗ್ ಕಾಂಟ್ರಾಕ್ಟ್ ಕೆಲಸ ಮಾಡುತ್ತಿದ್ದರಂತೆ. ಸಿಮೆಂಟ್ ಬಾಂಡ್ಲಿ ಹೊತ್ತಿದ್ದ ತಮ್ಮ ಜಾರಿ ಕೆಳಗೆ ಬಿದ್ದನಂತೆ.